ಉಷಾ ನರಸಿಂಹನ್

# ಮೂರುಸಾವಿರದ ಮನೆ

ಕಂದು ಬಣ್ಣದ ಡಸ್ಟರ್ ಕಾರು, ಬೇಸಿಗೆಯ ಏರು ಬಿಸಿಲಿನಿಂದ ಹೆಸರಿಗೆ ಟಾರಿದ್ದರೂ ಹಳ್ಳಿ ದಿಣ್ಣೆಗಳಿಂದ ಅಸಮವಾಗಿದ್ದ ಕಿರಿದಾದ ರಸ್ತೆಯಲ್ಲಿ ದೂಳೆಬ್ಬಿಸುತ್ತಾ ತಮ್ಮ ಅಂಗಡಿಯ ಮುಂದುಗಡೆಯೇ ನಿಂತುಕೊಂಡಾಗ ವಿಶ್ವನಾಥ ಶೆಟ್ಟರು 'ಎವ್ರರು ಚೂಡ್ರಾ' ಎಂದು ತಮ್ಮ ಸಹಾಯಕ ಹುಡುಗ ರಂಗನಿಗೆ ಹೇಳುತ್ತಿದ್ದಂತೆ, ಕುತೂಹಲದಿಂದ ಕಾರಿನ ಬಳಿಗೆ ಓಡಿ ಹೋಗಿ ನಿಲ್ಲುವುದಕ್ಕೂ ಏ.ಸಿ. ಕಾರಿನ ಕಿಟಕಿ ಕೆಳಗಿಳಿದು ಕಾರಿನ ಮುಂದುಗಡೆ ಎಡಕಿಟಕಿಯ ಬಳಿ ಕುಳಿತಿದ್ದ ಮಧ್ಯವಯಸ್ಕ ಶ್ರೀಮಂತರು ಇಲ್ಲಿ 'ಸೋನಾರಿ ಶೆಟ್ಟರ ಮನೆ ಎಲ್ಲಿ ಬರುತ್ತೆ?' ಎಂದು ಕೇಳುತ್ತಿದ್ದಂತೆಯೇ 'ಯಾರು? ಸೋನಾರಿ ಶೆಟ್ರಾ? ಹಂಗಂತ ಇಲ್ಲಿ ಯಾರು ಇಲ್ವಲ್ವ' ಎಂದ. 'ನೋಡಪ್ಪ ಅಲ್ಲಿ ಗಲ್ಲಾ ಮೇಲೆ ಕೂತಿರೋ ಯಾಜಮಾನ್ರನ್ನ ಕೇಳಿ ಹೇಳಪ್ಪ, ಇಲ್ಲಿ ವಾಸವೀ ರಸ್ತೇಲಿ ದೊಡ್ಮನೆಯಂತೆ, ಫೋನ್‌ನಲ್ಲಿ ಮಾತಾಡಿದ್ರು" ಎಂದರು ಶ್ರೀಮಂತರು. ಬಿಟ್ಟ ಬಾಣದಂತೆ ಹಿಂದೋಡಿ ಯಜಮಾನರ ಹತ್ತಿರ 'ಎವ್ರೋ ಸೋನಾರಿ ಶೆಟ್ರಂಟೆ... ನಾಕು ತೆಲೀದನ್ನಿ ಚಪ್ಯಾನು. ಮೀಕು ತೆಲಿಸಾ?' ಎಂದ.

'ಓ... ಅದೇರ್‍ರಾ ಮೂರು ಸಾವಿರದ ಮನೆ ಅನ್ನಿ ಚೆಪ್ತಾರು ಕದಾ... ಅದೇ ನಾಸವಿ ರಸ್ತೇ... ಅವರಿಗೆ ತೋರಿಸಿ ಬಾ' ಎಂದ ಶೆಟ್ಟರು ಕುತೂಹಲದಿಂದ ಕಾರಿನತ್ತ ನೋಡಿ 'ಇವರನ್ನು ಎಲ್ಲೋ ನೋಡಿರೋ ಹಂಗಿದೆಯಲ್ಲ' ಎನ್ನುತ್ತಾ ಕೆಳಗಿಳಿದು ತಾವೇ ಖುದ್ದಾಗಿ ಕಾರಿನ ಬಳಿ ಬಂದು, 'ನೀವು... ಗಂಜಾಂನವರಲ್ವೆ?' ಎಂದು ಕೇಳಿಯೇ ಬಿಟ್ಟರು. ಅವರೂ ಕೌತುಕದಿಂದ 'ಹೌದು ತಮ್ಮ ಪರಿಚಯ ಆಗಲಿಲ್ಲ' ಎಂದಾಗ. 'ನಮ್ಮ ಬೀಗರು ವೆಂಕಟರಮಣ ಶೆಟ್ರಿಗೆ ನೀವು ಸಂಬಂಧವಲ್ವೆ? ನಮ್ಮ ಮಗಳನ್ನು ವೆಂಕಟ್ರಮಣ ಶೆಟ್ರ ಎರಡನೇ ಮಗನಿಗೆ ಕೊಟ್ಟಿದೆ. ಅವರ ಮಗಳ ಮದುವೇಲಿ ನಿಮ್ಮನ್ನೆಲ್ಲ ನೋಡಿದ್ದು ಜ್ಞಾಪ್ಕ' ಎಂದಾಗ.

'ಹೌದು ಹೌದು. ಈಗ ಜ್ಞಾಪ್ಕ ಆಯ್ತು. ನಮ್ಮ ಸೊಸೆ ಈ ಊರಿನ ಹುಡುಗಿ ಅಂತ ನಮ್ಮ ಬೀಗ್ರು ಹೇಳಿದ್ರು. ಮರೆತ್ಬುಟ್ಟಿದ್ದೆ. ಒಳ್ಳೇದಾಯ್ತು ನೀವು ಸಿಕ್ಕಿದ್ದು. ಈಗಿನ್ನೂ ರಾಹುಕಾಲ ಮುಗಿದಿಲ್ಲ. ಇನ್ನೂ ಅರ್ಧಗಂಟೆ ಇದೆ. ಇಲ್ಲೇ ಹತ್ತು ನಿಮಿಷ ಕಾಲ ಹಾಕಿ ಆಮೇಲೆ ಹೋಗ್ತೀವಿ...' ಎಂದಾಗ 'ಓ ಏನೋ ಶುಭಕಾರ್ಯಕ್ಕೆ ಬಂದ ಹಾಗಿದೆ. ನಡೀರಿ ನಮ್ಮನೇಗೇ ಹೋಗಣ, ಒಂಚೂರು ಕಾಫಿ ತಿಂಡಿನೋ... ಇಲ್ಲ ಅಡಿಗೇನೇ ಮಾಡ್ಸಿ ಬಿಡ್ತೀನಿ' ಎನ್ನುತ್ತಾ ಎದ್ದು ಹುಡುಗನತ್ತ ನೋಡಿ 'ಪರೇ... ನೇನು ಇಂಟಿಕೆಳ್ಳಿ ವಸ್ತಾನು. ಜಾಗ್ರತಗಾ ಚೂಸ್ಕೋ' ಎನ್ನುತ್ತಾ, ಕಾರನ್ನು ಹಿಂಬಾಲಿಸಲು ಹೇಳುತ್ತಾ ತಮ್ಮ ಸ್ಕೂಟರನ್ನು ಹತ್ತಿ, ಓಡಿಸತೊಡಗಿದರು.

ಮನೆಯಲ್ಲಿ ಹೆಂಗಸರು ಕೈಕಾಲು ತೊಳೆದು ಒಳಬರುತ್ತಾ ಇರುವ ಹಾಗೆ ಅಣಿಯಾಗಿದ್ದ ಕಾಫೀ ಬಟ್ಟಲನ್ನು ಯಾವ ಬಿಗುಮಾನವಿಲ್ಲದೆ ಕೈಗೆತ್ತಿಕೊಂಡು ಕುಡಿಯುತ್ತಾ ಜೊತೆಯಲ್ಲಿಟ್ಟಿದ್ದ ಚಕ್ಕುಲಿ